# 'ಈ ಜಗತ್ತನ್ನು ಗೆಲ್ಲುವುದು ಹೇಗೆ?'

ಡಾ. ಎಚ್. ಎನ್. ಮುರಳೀಧರ

ಜಗತ್ತನ್ನೇ ನಮ್ಮದಾಗಿಸಿಕೊಳ್ಳಬೇಕು ಎಂಬ ಶ್ರೀಮಾತೆಯವರ ಸಂದೇಶದ ಮನೋಜ್ಞ ವಿಶ್ಲೇಷಣೆಯನ್ನು ಮಾಡಿರುವ ಲೇಖಕರು ಬೆಂಗಳೂರಿನ ವಿ.ವಿ.ಎಸ್.ಎಲ್ ಪದವಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರು, ಪ್ರಖ್ಯಾತ ಸಾಹಿತಿಗಳು, ಉಜ್ವಲ ಭಾಷಣಕಾರರು.

ಶ್ರೀರಾಮಕೃಷ್ಣರು ಶ್ರೀಮಾತೆ ಶಾರದಾದೇವಿಯವರನ್ನು 'ಸರಸ್ವತಿ' ಎಂದು ಕರೆದರು. "ಈ 'ಶಾರದೆ' ಸರಸ್ವತಿ. ಈಕೆ ಜಗತ್ತಿನ ಜನರಿಗೆ ಜ್ಞಾನವನ್ನು ನೀಡಲು ಬಂದಿದ್ದಾಳೆ." ಇದು ಶ್ರೀಮಾತೆಯವರ ಬಗ್ಗೆ ಶ್ರೀರಾಮಕೃಷ್ಣರ ಮಾತು. ಇಲ್ಲಿ ಗಮನಿಸಬೇಕಾದ್ದು ಶಾರದಾದೇವಿಯವರನ್ನು ಅವರು ಸರಸ್ವತಿ ಎಂದು ಕರೆದದಷ್ಟೇ ಅಲ್ಲ, ಈ ಸರಸ್ವತಿ ಜಗತ್ತಿನ ಜನರಿಗೆ ಜ್ಞಾನವನ್ನು ಕೊಡುವವಳು ಎಂದೂ ಹೇಳಿದ್ದಾರೆ.

ಶ್ರೀಮಾತೆಯವರು ನಮಗೆ ಹೇಳಿಕೊಟ್ಟದ್ದನ್ನು ಒಂದೇ ಒಂದು ಮಾತಿನಲ್ಲಿ ನಾವು ಹೇಳುವುದಾದರೆ, **ಈ ಜಗತ್ತನ್ನು ಗೆಲ್ಲುವುದು**. ಜಗತ್ತನ್ನು ಗೆಲ್ಲುವುದು ಅಂದಾಗ ನಮಗೆ ಬೇರೆ ಬೇರೆ ರೀತಿಯ ಅನುಮಾನಗಳು ಬರಬಹುದು. ಏಕೆಂದರೆ ಈಗಾಗಲೇ ಜಗತ್ತನ್ನು ಗೆಲ್ಲಬೇಕು ಎಂದು ಮೊದಲಿನಿಂದಲೂ ಬೇರೆ ಬೇರೆ ತರಹದ ಪ್ರಯತ್ನಗಳು ನಡೆಯುತ್ತಿವೆ. ಅಲೆಗ್ಸಾಂಡರ್ ಈ ರೀತಿಯ ಪ್ರಯತ್ನ ಮಾಡಿದ. ಕನ್ನಡದ ಆದಿಕವಿಯಾದ ಪಂಪನ ಆದಿಪುರಾಣವನ್ನು ಓದಿದವರಿಗೆ ನೆನಪಿರಬಹುದು. ಭರತ ಚಕ್ರವರ್ತಿ ಕೂಡ ಜಗತ್ತನ್ನು ಗೆಲ್ಲಬೇಕು ಎಂದು ಬಹಳ ಪ್ರಯತ್ನವನ್ನು ಮಾಡಿದ್ದ. ಆದರೆ ಈ ರೀತಿಯಲ್ಲಿ ಸೈನ್ಯದ ಸಹಾಯದಿಂದ ಜಗತ್ತನ್ನು ಗೆಲ್ಲಬೇಕು ಎಂದು ಪ್ರಯತ್ನ ಪಟ್ಟವರಿಗಾರಿಗೂ ಅದು ಸಾಧ್ಯವಾಗಲೇ ಇಲ್ಲ.

ಆದರೆ ಶ್ರೀಮಾತೆಯವರು ನಮಗೆ ಇನ್ನೊಂದು ಮಾರ್ಗವನ್ನು ಹೇಳಿಕೊಡುತ್ತಿದ್ದಾರೆ. ಮುಖ್ಯವಾಗಿ, ಮನುಷ್ಯನಿಗೂ ಜಗತ್ತಿಗೂ ಇರುವಂಥ ಸಂಬಂಧ ಯಾವುದು ಮತ್ತು ಈ ಜಗತ್ತನ್ನು ನಮ್ಮದನ್ನಾಗಿ ಮಾಡಿಕೊಳ್ಳುವುದು ಹೇಗೆ ಎನ್ನುವುದೇ ಅದು.

ನಾವು ಸಾಮಾನ್ಯವಾಗಿ ಏನನ್ನಾದರೂ ನಮ್ಮದನ್ನಾಗಿ ಮಾಡಿಕೊಳ್ಳಬೇಕು ಎಂದು ಬಯಸುತ್ತೇವೆ. ಅಂದರೆ ಅದನ್ನು ನಾವು ಪಡೆದುಕೊಳ್ಳಬೇಕು, ಅದು ನಮ್ಮ ಹತ್ತಿರ ಇರಬೇಕು, ಯಾವಾಗಲೂ ಅದು ನಮ್ಮ ಕೈಗೆ ಸಿಗುವ ಹಾಗೆ ಇರಬೇಕು, ನಾವು ಯಾವಾಗಲೂ ಅದನ್ನು ನೋಡುತ್ತ ಇರಬೇಕು, ಇನ್ನೊಬ್ಬರಿಂದ ಅದನ್ನು ರಕ್ಷಿಸಿಕೊಳ್ಳಬೇಕು ಎನ್ನುವಂತಹ ಬಯಕೆ ಅದು. ಆದರೆ, ಶ್ರೀಮಾತೆಯವರು ನಮಗೆ ಜಗತ್ತನ್ನು ನಮ್ಮದನ್ನಾಗಿ ಮಾಡಿಕೊಳ್ಳುವುದನ್ನು ಹೇಳಿಕೊಟ್ಟಿದ್ದು ಬೇರೊಂದು ರೀತಿಯಲ್ಲಿ.

ನಾವು ಇವತ್ತು 'ಜಾಗತೀಕರಣ', 'ಉದಾರೀಕರಣ' ಎನ್ನುವ ಮಾತುಗಳನ್ನು ಕೇಳುತ್ತೇವೆ. ನಮ್ಮಲ್ಲಿ ಕೂಡ ಜಾಗತೀಕರಣದ ಬೇರೆ ಬೇರೆ ಮಾದರಿಗಳಿವೆ. ಗಣೇಶ ಮತ್ತು ಷಣ್ಮುಖರ ನಡುವೆ ಒಂದು ಸ್ಪರ್ಧೆ ಏರ್ಪಟ್ಟಿತು. 'ಯಾರು ಇಡೀ ವಿಶ್ವವನ್ನು ಮೊದಲು ಸುತ್ತಿಬರುತ್ತಾರೋ ಅವನಿಗೆ ಬಹುಮಾನ' ಎಂದಾಗ, ಷಣ್ಮುಖ ತನ್ನ ವಾಹನವಾದ ನವಿಲನ್ನೇರಿ ಜಗತ್ತನ್ನು ಸುತ್ತಿಬರಲು ಹೊರಡುತ್ತಾನೆ. ಆದರೆ ಗಣೇಶ ಹಾಗೆ ಮಾಡುವುದಿಲ್ಲ. ಬದಲಾಗಿ ಅಲ್ಲೇ ಕುಳಿತಿರುವ ತನ್ನ ತಂದೆತಾಯಿಯರಾದ ಶಿವಪಾರ್ವತಿಯರಿಗೆ ಪ್ರದಕ್ಷಿಣೆ ಮಾಡುತ್ತಾನೆ. ಇದನ್ನು ಒಂದು ರೀತಿಯಲ್ಲಿ ಬುದ್ಧಿವಂತಿಕೆಯ ಪ್ರದರ್ಶನದ ಕಥೆಯಾಗಿ ಹೇಳುವುದುಂಟು. ಆದರೆ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಇದು ಜಗತ್ತನ್ನು ನೋಡುವಂಥ ಅಥವಾ ಜಗತ್ತನ್ನು ಅರಿಯುವಂಥ ಬೇರೆ ಬೇರೆ ಮಾದರಿಗಳ ಪ್ರಾತಿನಿಧಿಕ ರೂಪವೆಂದೂ ನಾವು ಗಮನಿಸಲು ಸಾಧ್ಯ. ಜಗತ್ತನ್ನು ಗಣೇಶ ನೋಡಿದ ಬಗೆ ಬೇರೆ, ಷಣ್ಮುಖ ನೋಡಿದ ಬಗೆ ಬೇರೆ. ಹಾಗೆಯೇ ಪ್ರತಿಯೊಬ್ಬ ಮನುಷ್ಯನ ದೃಷ್ಟಿಯೂ ಬೇರೆ ಬೇರೆ.

ಜಗತ್ತಿನ ಇತಿಹಾಸದಲ್ಲಿ, ಸೈನ್ಯವನ್ನು ತೆಗೆದುಕೊಂಡು ದಾಳಿ

ಮಾಡಿದವರಿಗೆ ಪ್ರಪಂಚ ದಕ್ಕಲಿಲ್ಲ. ಆದರೆ, ಶ್ರೀಮಾತೆಯವರು ಹೇಳುತ್ತಾರೆ, "ಇಡೀ ಜಗತ್ತನ್ನು ನಮ್ಮದನ್ನಾಗಿ ಮಾಡಿಕೊಳ್ಳಬೇಕು" ಎಂದು. ಅವರ ಕೊನೆಯ ಸಂದೇಶದಲ್ಲಿ ಹೀಗೆ ಹೇಳುತ್ತಾರೆ, "ನೋಡಮ್ಮ, ಇಡೀ ಜಗತ್ತನ್ನು ನಿನ್ನದನ್ನಾಗಿ ಮಾಡಿಕೊಳ್ಳುವುದಕ್ಕೆ ಕಲಿತುಕೋ" ಎಂದು. "ಈ ಕಾರ್ಯಕ್ಕೆ ನೀನು ಒಂದು ದೊಡ್ಡ ಸೈನ್ಯ ಇಟ್ಟುಕೋ. ದೊಡ್ಡ ತಯಾರಿ ಮಾಡಿಕೊಂಡು, ಬೇರೆಯವರ ಮೇಲೆ ದಾಳಿ ಮಾಡು" ಎಂದೇನೂ ಅವರು ಹೇಳಲಿಲ್ಲ. ಹಾಗಾದರೆ ಜಗತ್ತನ್ನು ನಮ್ಮದನ್ನಾಗಿ ಮಾಡಿಕೊಳ್ಳುವುದು ಹೇಗೆ? ಇದಕ್ಕೆ ಬಹಳ ದೊಡ್ಡ ಉಪಾಯವೇನೂ ಬೇಕಾಗಿಲ್ಲ ಅಥವಾ ಹೆಚ್ಚಿನ ಸಿದ್ಧತೆಯನ್ನೇನೂ ಮಾಡಿಕೊಳ್ಳಬೇಕಾಗಿಲ್ಲ. **ಒಂದು ರೀತಿಯಲ್ಲಿ, ನಾವು ಈಗ ಇರುವ ಅಸ್ತಿತ್ವವನ್ನೇ ಬೇರೆ ದೃಷ್ಟಿಕೋನ ದಿಂದ ನೋಡಲು ಸಾಧ್ಯವಾದರೆ, ಅಷ್ಟೇ ಸಾಕು.**

ಈ ಸಂದರ್ಭದಲ್ಲಿ ಒಂದು ಕಥೆ ನೆನಪಾಗುವುದು. ಒಂದು ಊರು. ಆ ಊರಿನಲ್ಲಿ ಒಬ್ಬ ಒಂದು ಹೊಲಿಗೆ ಅಂಗಡಿ ಆರಂಭ ಮಾಡಿದ. ಇನ್ನು ಜನಗಳನ್ನು ಆಕರ್ಷಣೆ ಮಾಡಬೇಕಲ್ಲ, ಏನಾದರೂ ಬೋರ್ಡ್ ಹಾಕಬೇಕು. ಈಗಿನ ಕಾಲ ಜಾಹೀರಾತಿನ ಕಾಲ ತಾನೆ. ಆದ್ದರಿಂದ ಅವನು, The best tailoring shop in the city – 'ಈ ಊರಿನಲ್ಲಿಯೇ ಅತ್ಯುತ್ತಮವಾದ ಹೊಲಿಗೆ ಅಂಗಡಿ' ಎಂದು ಬೋರ್ಡ್ ಹಾಕಿಕೊಂಡನಂತೆ. ಹಾಗೆಯೇ, ಅದೇ ರಸ್ತೆಯಲ್ಲಿ ಇನ್ನೊಬ್ಬ ಇನ್ನೊಂದು ಹೊಲಿಗೆ ಅಂಗಡಿಯನ್ನು ಆರಂಭ ಮಾಡಿದನಂತೆ. ಅವನೂ ಏನಾದರೂ ಬೋರ್ಡ್ ಹಾಕಿಕೊಳ್ಳಬೇಕಲ್ಲ. "ಪಕ್ಕದ ಅಂಗಡಿಯವನು, 'ಊರಿನಲ್ಲಿಯೇ ಅತ್ಯುತ್ತಮವಾದದ್ದು' ಎಂದು ಹಾಕಿಕೊಂಡಿದ್ದಾನೆ. ನಾನು, 'ಈ ಜಿಲ್ಲೆಯಲ್ಲೇ ಅತ್ಯುತ್ತಮವಾದ ಹೊಲಿಗೆ ಅಂಗಡಿ' ಎಂದು ಹಾಕಿಕೊಳ್ಳುತ್ತೇನೆ" ಎಂದು ನಿರ್ಧಾರ ಮಾಡಿ, ಹಾಗೇ ಮಾಡಿದನಂತೆ. ಅದೇ ರಸ್ತೆಯಲ್ಲಿ ಇನ್ನೊಂದು ಹೊಲಿಗೆ ಅಂಗಡಿ ಏಕೆ ಎಂದು ಕೇಳಬೇಡಿ. ಹಾಗೆ ಕೇಳಿದರೆ ನಾನು ಕಥೆ ಹೇಳುವುದಕ್ಕಾಗುವುದಿಲ್ಲ. ಅವನು ಬೋರ್ಡ್ ಹಾಕಿಕೊಂಡಂತೆ, ಒಬ್ಬ ರಾಜ್ಯದಲ್ಲಿಯೇ ಎಂದೂ, ಇನ್ನೊಬ್ಬ ದೇಶದಲ್ಲಿಯೇ ಎಂದೂ, ಮತ್ತೊಬ್ಬ ಜಗತ್ತಿನಲ್ಲಿಯೇ ಅತ್ಯುತ್ತಮವಾದ ಹೊಲಿಗೆ ಅಂಗಡಿ ಎಂದೂ ಬೋರ್ಡುಗಳನ್ನು ಹಾಕಿಕೊಂಡರಂತೆ. ಇಷ್ಟೆಲ್ಲ ಆದ ಮೇಲೂ ಆ ರಸ್ತೆಯಲ್ಲಿ ಇನ್ನೊಂದು ಹೊಲಿಗೆ ಅಂಗಡಿ ಆರಂಭ ಮಾಡುವುದಕ್ಕೆ ಅವಕಾಶ ಇತ್ತು ಅನ್ನುವುದೇ ಸ್ವಾರಸ್ಯ. ಅದರ ಒಡೆಯನೂ ಬಹಳ ಯೋಚನೆ ಮಾಡಿ, ಒಂದು ಬೋರ್ಡ್ ಹೀಗೆ ಹಾಕಿಕೊಂಡನಂತೆ: 'ಈ ರಸ್ತೆಯಲ್ಲೇ ಅತ್ಯುತ್ತಮವಾದ ಹೊಲಿಗೆ ಅಂಗಡಿ.' ಇದು ನಮಗೆ ಏನನ್ನು ತೋರಿಸುತ್ತದೆ? **ಜಗತ್ತಿನಲ್ಲಿಯೇ ಅತ್ಯುತ್ತಮವಾಗಿ ಇರುವುದು ಎಂದರೆ, ನಾವು ನಮ್ಮ ಸ್ಥಳದಲ್ಲಿ ಉತ್ತಮರಾದರೆ ಸಾಕು ಎನ್ನುವುದನ್ನು.**

ಒಬ್ಬ ಬೆಸ್ತನನ್ನು ಆತನ ಮಗ ಒಂದು ಪ್ರಶ್ನೆ ಕೇಳಿದನಂತೆ. ಅದನ್ನು ಅವನು ಯಾವುದೋ ಪ್ರವಚನದಲ್ಲಿ ಆಲಿಸಿದ್ದ ಎಂದು ಕಾಣುತ್ತದೆ. ಅಲ್ಲಿ, 'ಸ್ವರ್ಗ' ಅನ್ನುವ ಪದ ಅವನ ಕಿವಿಗೆ ಬಿದ್ದಿತ್ತು.



ಅವನು ಕೇಳಿದನಂತೆ, "ಅಪ್ಪಾ, ಈ ಸ್ವರ್ಗ, ಸ್ವರ್ಗ ಅಂತೆಲ್ಲ ಹೇಳ್ತಾರಲ್ಲ, ಅದು ಎಷ್ಟು ಎತ್ತರ ಇದೆ?" ಅವನು ಬೆಸ್ತನಾಗಿದ್ದರಿಂದ ಅವನ ವೃತ್ತಿಯ ಪರಿಭಾಷೆಯಲ್ಲಿಯೇ ಪ್ರಶ್ನೆಯನ್ನು ಕೇಳಿದ. ಆ ಮೂಲಕ ಅವನು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನಪಡುತ್ತ, ಮುಂದುವರಿದು ಕೇಳುತ್ತಾನೆ, "ಅಪ್ಪಾ, ಒಂದರ ಮೇಲೆ ಒಂದರ ಹಾಗೆ ಎಷ್ಟು ಮೀನುಗಳನ್ನು ನಾವು ಮೇಲಕ್ಕೆ ಮೇಲಕ್ಕೆ ಜೋಡಿಸುತ್ತ ಹೋದರೆ ಸ್ವರ್ಗವನ್ನು ಮುಟ್ಟಬಹುದು?" ಆಗ ಅವನ ತಂದೆ ಹೀಗೆ ಉತ್ತರವನ್ನು ಕೊಟ್ಟನಂತೆ: "ನೋಡು ಮಗು, ಸ್ವರ್ಗ ಬಹಳ ಎತ್ತರದಲ್ಲಿರುವುದೇನೋ ನಿಜ. ಆದರೆ ಆ ಸ್ವರ್ಗವನ್ನು ಮುಟ್ಟಬೇಕಾದರೆ, ನೀನು ಹೇಳಿದ ಹಾಗೆ ಒಂದರ ಮೇಲೊಂದು ಮೀನುಗಳನ್ನು ಜೋಡಿಸುತ್ತ ಹೋಗಬೇಕಾಗಿಲ್ಲ. ಇದು ಜೋಡಿಸುವಿಕೆಯಿಂದ ಆಗುವಂಥದ್ದಲ್ಲ. ಬದಲಾಗಿ ಒಂದೇ ಮೀನು ಈ ಭೂಮಿಯಿಂದ ಆ ಸ್ವರ್ಗದವರೆಗೂ ಬೆಳೆಯಬೇಕಾಗುತ್ತದೆ."

ಸಾಮಾನ್ಯವಾಗಿ ನಾವು ಏನನ್ನಾದರೂ ನಮ್ಮದನ್ನಾಗಿ ಮಾಡಿಕೊಳ್ಳಬೇಕು ಅಂದಾಗ, ನಾವು ಆಗಲೇ ನೋಡಿದ ಹಾಗೆ, ಅದನ್ನು ನಮ್ಮ ಹಿಡಿತದಲ್ಲಿಟ್ಟುಕೊಳ್ಳಬೇಕು ಎಂದು ಆಸೆಪಡುತ್ತೇವೆ. ಆದರೆ, ಶ್ರೀಮಾತೆಯವರು ಕೊಟ್ಟಿರುವಂತಹ ಉಪಾಯ ನೋಡಿ. ಅವರು ಒಂದು ಕಡೆ ಹೇಳುತ್ತಾರೆ, "ಜಗತ್ತನ್ನು ನಿನ್ನದನ್ನಾಗಿ ಮಾಡಿಕೋ" ಎಂದು. ಇನ್ನೊಂದು ಕಡೆ, ಮೇಲಿನ ಮಾತನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಬೇಕಾಗಿರುವಂಥ ಒಂದು ಕೀಲಿಕೈಯನ್ನು ಅವರೇ ಒದಗಿಸುತ್ತಾರೆ:

"ನೋಡು, ಈ ಜಗತ್ತು ಭಗವಂತನದ್ದು. ಅವನು ನಮ್ಮನ್ನು ಎಲ್ಲೇ ಇಡಲಿ, ಏನೇ ಮಾಡಲಿ, ನಾವು ಅದನ್ನು ಸಮಾಧಾನದಿಂದ ಸ್ವೀಕರಿಸಬೇಕು. ನಾವು ಕಷ್ಟಪಡುವುದು ನಮ್ಮ ಕರ್ಮದ ಪರಿಣಾಮಗಳಿಂದಾಗಿಯೇ. ಅದಕ್ಕಾಗಿ ಯಾರನ್ನೂ ದೂರುವುದು ಸರಿಯಲ್ಲ. ಶ್ರದ್ಧಾಭಕ್ತಿಗಳಿಂದ ನಾವು ಸಂಪೂರ್ಣವಾಗಿ ಭಗವಂತನಲ್ಲಿ ಶರಣಾಗಿ ನಮ್ಮಿಂದ ಸಾಧ್ಯವಾದಷ್ಟು ಬೇರೆಯವರ ಸೇವೆ ಮಾಡಬೇಕು, ನಮ್ಮಿಂದ ಯಾರಿಗೂ ದುಃಖವಾಗಬಾರದು." ಇಲ್ಲಿ ಗಮನಿಸಬೇಕಾದ ಎರಡು ಸಂಗತಿಗಳಿವೆ. ಒಂದು, 'ಈ ಜಗತ್ತನ್ನು ನಿನ್ನದನ್ನಾಗಿ ಮಾಡಿಕೋ' ಎನ್ನುವುದು. ಜಗತ್ತನ್ನು ನಮ್ಮದನ್ನಾಗಿ ಮಾಡಿಕೊಳ್ಳಬೇಕಾದರೆ ಗುರುತಿಸಬೇಕಾದ ಸಂಗತಿ ಏನೆಂದರೆ, 'ಈ ಜಗತ್ತು ಭಗವಂತನದು' ಎಂಬುದು. ಸಾಮಾನ್ಯವಾಗಿ ನಾವು ಈ ಜಗತ್ತನ್ನು, "ಇದು ನನ್ನ ಜಗತ್ತು, ಯಾವ ವ್ಯಕ್ತಿಗಳೇ ಆಗಲಿ, ಪ್ರದೇಶವೇ ಆಗಲಿ, ಇದು ನನ್ನದು, ಅದು ನನ್ನದು" ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಜಗತ್ತಿನಿಂದ ನಮಗೆ ಸುಖ ಸಿಕ್ಕಾಗ, ಸಂತೋಷ ಸಿಕ್ಕಾಗ, ನೆಮ್ಮದಿ ಸಿಕ್ಕಾಗ ಅದನ್ನು ನಮ್ಮದು ಎಂದು ಹೇಳಿಕೊಳ್ಳುತ್ತೇವೆ. ಆದರೆ, ಏಟು ಬಿದ್ದಾಗ, ಹೊಡೆತ ಬಿದ್ದಾಗ, ದುಃಖ, ನಿರಾಶೆ ಮುಂತಾದುವು ಉಂಟಾದಾಗ "ಅಯ್ಯೋ ಈ ಜಗತ್ತಿಗೂ ನನಗೂ ಸಂಬಂಧವಿಲ್ಲ, ಅದು ನನ್ನದಲ್ಲ" ಎಂದುಕೊಳ್ಳುತ್ತೇವೆ.

ಅಷ್ಟೇ ಅಲ್ಲ, ನಾವು ಎಷ್ಟೋ ಸಲ, ಈ ಬಗೆಯ ಆಲೋಚನಾ ಲಹರಿಯಲ್ಲಿ ತೇಲಾಡುತ್ತಿರುತ್ತೇವೆ: "ಅಲ್ಲಾ, ಈ ಜಗತ್ತಿನಲ್ಲಿ ನನ್ನಂಥವರಿಗೆ ಹೀಗಾಗಬೇಕೇ? ಒಳ್ಳೆಯ ಜಗತ್ತನ್ನು ಪಡೆಯುವ ಅರ್ಹತೆ ನನಗೆ ಇದೆ (I deserve a better world). ಈ ಜಗತ್ತು ಸರಿಯಿಲ್ಲ, ಬಿಡಿ. ಎಂಥೆಂಥವರೋ ಎಷ್ಟು ಚೆನ್ನಾಗಿ ಇರುತ್ತಾರೆ, ನೋಡಿ. ಅವರೆಷ್ಟು ಮೋಸ ಮಾಡುತ್ತಾರೆ, ಇವರೆಷ್ಟು ಅನ್ಯಾಯ ಮಾಡುತ್ತಾರೆ, ಬೇರೆಯವರೆಷ್ಟು ಭ್ರಷ್ಟಾಚಾರಿಗಳು. ಅವರೆಲ್ಲ ಎಂಥೆಂಥ ದೊಡ್ಡ ದೊಡ್ಡ ಬಂಗಲೆಗಳನ್ನೆಲ್ಲ ಕಟ್ಟಿಕೊಂಡು ಎಷ್ಟು ಚೆನ್ನಾಗಿದ್ದಾರೆ? ಆದರೆ, ನಾನು ಎಷ್ಟು ಜಪ, ಎಷ್ಟು ಹೋಮ, ಎಷ್ಟು ಪ್ರದಕ್ಷಿಣೆ, ಎಷ್ಟು ತೀರ್ಥಯಾತ್ರೆ – ಏನೇನೆಲ್ಲ ಮಾಡುತ್ತ ಇದ್ದೇನೆ. ಆದರೆ ನನಗೆ ಇಂಥ ದುಸ್ಥಿತಿ ಉಂಟಾಗಬೇಕೇ? ಆದ್ದರಿಂದ, ಏಕೋ ಏನೋ ಈ ಪ್ರಪಂಚವೇ ಸರಿ ಇಲ್ಲ. ದೇವರು ಸ್ವಲ್ಪ ಯೋಚನೆ ಮಾಡಿದ್ದರೆ ಇನ್ನೂ ಸ್ವಲ್ಪ ಒಳ್ಳೆಯ ಜಗತ್ತನ್ನು ಸೃಷ್ಟಿ ಮಾಡಬಹುದಿತ್ತೋ ಏನೋ? ಎಂತಹ ಜಗತ್ತು? ನನಗೂ ಸಂತೋಷ ಸಿಗುವಂಥ ಜಗತ್ತು."

ಹೀಗೆ ಭಾವಿಸುತ್ತ ಈ ಜಗತ್ತು ನಮಗೆ ಕೊಡಬೇಕಾದ್ದನ್ನು ಕೊಡಲಿಲ್ಲವೆಂದು ಅದನ್ನು ದೂರ ದೂಡಿಬಿಡುತ್ತೇವೆ. ಆದರೆ ಇಲ್ಲಿ ಶ್ರೀಮಾತೆಯವರು ನಮಗೆ ಇನ್ನೊಂದು ಉಪಾಯವನ್ನು ಹೇಳಿಕೊಡುತ್ತಿದ್ದಾರೆ. ಅವರು ಹೇಳುತ್ತಾರೆ, "ನಾವು ಕಷ್ಟ ಪಡುವುದು ನಮ್ಮ ನಮ್ಮ ಕರ್ಮದ ಪರಿಣಾಮಗಳಿಂದಾಗಿ. ಆದ್ದರಿಂದ ನಾವು ಯಾರನ್ನೂ ದೂರುವುದು ಸರಿಯಲ್ಲ. ಶ್ರದ್ಧಾಭಕ್ತಿಗಳಿಂದ ಸಂಪೂರ್ಣವಾಗಿ ಭಗವಂತನಲ್ಲಿ ಶರಣಾಗತನಾಗಬೇಕು." ನಾವು ಯಾವಾಗ ನಮ್ಮ ನಮ್ಮ ಕರ್ಮಗಳ ಪರಿಣಾಮಗಳ ಜವಾಬ್ದಾರಿಯನ್ನು ನಮ್ಮ ಮೇಲೆಯೇ ಹೊತ್ತುಕೊಳ್ಳುತ್ತೇವೆಯೋ, ಆಗ ನಾವು ಇನ್ನೊಬ್ಬರನ್ನು ದೂರುವುದಿಲ್ಲ. ಆಗ ನಮ್ಮ ಕರ್ಮದ ಪರಿಣಾಮವೇ ಬೇರೆ ಬೇರೆ ರೀತಿಯಲ್ಲಿ ಜಗತ್ತಿನಿಂದ ನಮಗೆ ತಿರುಗಿಬಂದಿದೆಯೆಂದು ನಾವು ಅಂದುಕೊಳ್ಳುತ್ತೇವೆಯೇ ಹೊರತು, ಜಗತ್ತು, ನಾವು ಅದಕ್ಕೆ ಕೊಟ್ಟಿಲ್ಲದೆ ಇರುವ, ಏನನ್ನೋ ನಮಗೆ ಕೊಡುತ್ತಿದೆ ಎಂದು ಅಂದುಕೊಳ್ಳುವುದಿಲ್ಲ.

ಇಲ್ಲಿ ಶ್ರೀಮಾತೆಯವರು, ಜಗತ್ತನ್ನು ಒಪ್ಪಿಕೊಳ್ಳಬೇಕು ಎಂದು ಹೇಳಿಕೊಡುತ್ತಾರೆ. ಜಗತ್ತನ್ನು ಹೇಗೆ ಒಪ್ಪಿಕೊಳ್ಳುವುದು? "ಅಯ್ಯೋ ಬಿಡಿ, ಇವತ್ತಲ್ಲ ನಾಳೆ ಒಳ್ಳೆಯದಾಗುತ್ತದೆ, ಅಲ್ಲಿಯ ವರೆಗೆ ಅನುಭವಿಸಿಕೊಂಡು ಇರೋಣ" ಎಂಬ ದೃಷ್ಟಿಯಿಂದ ಜಗತ್ತನ್ನು ಒಪ್ಪಿಕೊಳ್ಳುವುದಲ್ಲ. **ಈ ಜಗತ್ತು ಹೇಗೆ ಇದೆಯೋ ಹಾಗೆಯೇ ಒಪ್ಪಿಕೊಳ್ಳುವುದು.** "ಸುಖದ ಜಗತ್ತು ನನ್ನದು, ದುಃಖದ ಜಗತ್ತು ನನ್ನದು. ಸನ್ಮಾನವನ್ನು ಕೊಡುವಂಥ ಜಗತ್ತು ನನ್ನದು, ಅವಮಾನ ಮಾಡುವಂಥ ಜಗತ್ತು ನನ್ನದು. ಇವೆಲ್ಲವನ್ನೂ ನಾನು, ಈ ಜಗತ್ತು ಹೇಗೆ ಇರುವುದೋ ಹಾಗೆಯೇ ಒಪ್ಪಿಕೊಳ್ಳುತ್ತೇನೆ" ಎಂಬ ಭಾವದಿಂದ ಒಪ್ಪಿಕೊಳ್ಳುವುದು. ಏಕೆ ಒಪ್ಪಿಕೊಳ್ಳಬೇಕು ಅಂದರೆ, 'ಈ ಜಗತ್ತು ಭಗವಂತನಿಗೆ ಸೇರಿದ್ದು' ಅನ್ನುವ ಕಾರಣದಿಂದಾಗಿ ಮಾತ್ರವೇ ಒಪ್ಪಿಕೊಳ್ಳಬೇಕು.

ಕಣ್ಣು ಸರಿಯಾಗಿ ಕಾಣುವುದಿಲ್ಲವೆಂದು ನಾವು ವೈದ್ಯರ ಹತ್ತಿರ ಹೋದರೆ, ಅವರು ಪ್ರಪಂಚವನ್ನೇನೂ ಬದಲಾವಣೆ ಮಾಡುವುದಿಲ್ಲ. ನಮಗೆ ಈಗ ಇರುವ ಕಣ್ಣಿಗೇ ಹೊಸ ಕನ್ನಡಕ ಕೊಡುತ್ತಾರೆ, ಅಷ್ಟೆ. ಆಗ ಪ್ರಪಂಚ ಹೇಗೆ ಕಾಣಬೇಕೋ ಹಾಗೆ ನಮಗೆ ಕಾಣುತ್ತದೆ. ಇದನ್ನೇ ಶ್ರೀಮಾತೆಯವರು ಮಾಡುವುದು.

**ಶ್ರೀಮಾತೆಯವರ ಜೀವನದೃಷ್ಟಿ ಎಲ್ಲವನ್ನೂ ಸಮಗ್ರತೆಯಲ್ಲಿ ಸ್ವೀಕಾರ ಮಾಡುವಂಥ ದೃಷ್ಟಿ. ಶ್ರೀಮಾತೆಯವರು ಕಂಡ ನೋಟದಿಂದ ನಾವು ಜಗತ್ತನ್ನು ನೋಡಿದಾಗ, ನಾವು ಅದೇ ಜಗತ್ತನ್ನೇ ನೋಡುತ್ತ ಇರುತ್ತೇವೆ. ಆದರೆ ಆ ಜಗತ್ತು ಮಾತ್ರ ನಮಗೆ ಬೇರೆ ರೀತಿಯಾಗಿ ಕಾಣುತ್ತದೆ. ಅದು 'ಭಗವಂತನ ಜಗತ್ತು' ಎಂಬಂತೆ ಆಗುತ್ತದೆ. ಅಷ್ಟೇ, ಅಲ್ಲ, ಆ ಕಾರಣದಿಂದಾಗಿಯೇ ಅದು 'ನಮ್ಮ ಜಗತ್ತು' ಕೂಡ ಆಗುತ್ತದೆ.**

ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ನಮ್ಮ ಮನೋಧರ್ಮವೇ, ನಮಗೆ ಹೇಗೆ ತೋರುವುದೋ ಆ ರೀತಿಯ ಪ್ರಪಂಚವನ್ನು ಸೃಷ್ಟಿಮಾಡುತ್ತದೆ... ನಮ್ಮ ಆಲೋಚನೆಗಳು ಕೆಲವೊಂದು ಸಂಗತಿಗಳನ್ನು ಸುಂದರವಾಗಿ ಕಾಣುವಂತೆ ಮಾಡಿದರೆ, ಮತ್ತೆ ಕೆಲವು ಸಂಗತಿಗಳನ್ನು ಕುರೂಪವಾಗಿ ಕಾಣುವಂತೆ ಮಾಡುತ್ತವೆ. ಇಡೀ ಪ್ರಪಂಚ ಇರುವುದು ನಮ್ಮ ಮನಸ್ಸುಗಳಲ್ಲೇ. ಈ ಜಗತ್ತಿನಲ್ಲಿ ಇರುವುದೆಲ್ಲವೂ ಒಳಿತಾದದ್ದೇ, ಸುಂದರವಾಗಿರುವುದೇ. ನೀನು ಕೆಡುಕನ್ನೇನಾದರೂ ಕಂಡರೆ, ನೀನು ಅದನ್ನು ಸರಿಯಾದ ಬೆಳಕಿನಲ್ಲಿ ಅರ್ಥಮಾಡಿಕೊಂಡಿಲ್ಲವೆಂದು ತಿಳಿದುಕೋ." ಈ ಬಗೆಯ ದೃಷ್ಟಿಯನ್ನು ಶ್ರೀಶಾರದಾದೇವಿಯವರು ಮಾತ್ರವೇ ದಯಪಾಲಿಸಬಲ್ಲರು. ನಮ್ಮೆಲ್ಲರಿಗೂ ಅಂತಹ ದೃಷ್ಟಿಯನ್ನು ಕೊಟ್ಟು ದಾರಿತೋರಲಿ ಎಂದು ಅವರನ್ನು ಪ್ರಾರ್ಥಿಸೋಣ. ✶